

### ಭಾರೀ ಯೋಜನೆ

ಓರ್ವ ಡಾಕ್ಟರ್ ಮತ್ತು ಎಂಜಿನಿಯರ್ ಒಂದೇ ಹುಡುಗಿಯನ್ನು ಪ್ರೀತಿಸುತ್ತಿದ್ದರು.

ಪ್ರತಿ ದಿನ ಡಾಕ್ಟರ್ ಒಂದು ಗುಲಾಬಿ ಹೂವನ್ನೂ ಎಂಜಿನಿಯರ್ ಒಂದು ಸೇಬಿನ ಹಣ್ಣನ್ನೂ ಆಕೆಗೆ ನೀಡುತ್ತಿದ್ದರು. ಎಂಜಿನಿಯರನ ಈ ಅಭ್ಯಾಸದಿಂದ ಅಚ್ಚರಿಗೊಂಡ ಕನ್ಯೆ ಆತನನ್ನು ವಿಚಾರಿಸಿದಳು. 'ಗುಲಾಬಿ ನೀಡುವುದೇನೋ ಪ್ರೀತಿಯಲ್ಲಿ ಸಾಮಾನ್ಯ. ಆದರೆ ನೀನೇಕೆ ಸೇಬು ನೀಡುತ್ತಿರುವೆ?'

ಎಂಜಿನಿಯರ್ ಉತ್ತರಿಸಿದ, 'ಏಕೆಂದರೆ ದಿನಕ್ಕೊಂದು ಸೇಬು ವೈದ್ಯರನ್ನು ದೂರವಿರಿಸುತ್ತದೆ...!'

★★★

### ನೋಟಿನ ಆಘಾತ

**ರಿಪೋರ್ಟರ್:** ನಿಮ್ಮ ಪ್ರಕಾರ ನಿಮ್ಮ ಜೀವನದ ಬಲು ದೊಡ್ಡ ತಪ್ಪು ಯಾವುದು?

**ಡಾಕ್ಟರ್ ಗುಂಡ:** ಒಂದು ವರ್ಷದ ಹಿಂದೆ ನನ್ನ ಕನ್ಸಲ್ಟೇಷನ್ ಫೀಸನ್ನು ರೂಪಾಯಿ 400 ರಿಂದ 500ಕ್ಕೆ ಏರಿಸಿದ್ದು...!

★★★

### ಕಡು ಬಡವ

**ಟೀಚರ್:** ಪಾಠ ಕೇಳೋದು ಬಿಟ್ಟು ಕ್ಲಾಸಲ್ಲಿ ಬರೀ ಹುಡುಗಿಯರ ಜೊತೆ ಮಾತಾಡ್ತಾ ಇರ್ತೀಯಲ್ಲ, ಯಾಕೋ ಗುಂಡ...?

**ಗುಂಡ:** ನಾನು ಕಡು ಬಡವ ಟೀಚರ್, ನನ್ನ ಬಳಿ ಮೊಬೈಲೂ ಇಲ್ಲ, ಇಂಟರ್ನೆಟ್ಟೂ ಇಲ್ಲ...!

★★★

### ಬದ್ಧತೆ

**ಹುಡುಗ:** ನಿನ್ನ ವಯಸ್ಸೆಷ್ಟು?

**ಹುಡುಗಿ:** 20 ವರ್ಷ

**ಹುಡುಗ:** ಆದರೆ 5 ವರ್ಷದ ಮೊದಲೂ ನೀನು ಇದನ್ನೇ ಹೇಳಿದ್ದೆ...?

**ಹುಡುಗಿ:** ನೋಡಿದೆಯಾ...? ಹೇಳಿದ ಮಾತಿಗೆ ನಾವು ಹುಡುಗಿಯರು ಅದೆಷ್ಟು ಬದ್ಧರಾಗಿರುವೆವೆಂದು...!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

### ನೀವೇ ಹೇಳ್ತಿದ್ರೆಲ್ಲ?

**ಗುಂಡ:** ಮೇಡಂ ಇಲ್ನೋಡಿ ನನ್ ತಲೆಗೆ ಇರುವೆ ಹತ್ತುತ್ತಿವೆ

**ಟೀಚರ್:** ಲೋ ಗುಂಡ ಅದನ್ಯಾಕೆ ನನಗೆ ತೋರಿಸ್ತಿದಿಯಾ?

**ಗುಂಡ:** ನೀವೇ ಹೇಳ್ತಿದ್ರಲ್ಲ ಮೇಡಂ, ನಿನ್ ತಲೆಗೆ ಏನೂ ಹತ್ತಲ್ಲ ಅಂತ.

★★★

### ನಿಮ್ಮಪ್ಪ ಹೇಳಿದಾನೆ ಕಣೇ

**ಪತ್ನಿ:** ಏನ್ರೀ ನೀವು?

**ಪತಿ:** ಯಾಕೆ ಏನಾಯ್ತು?

**ಪತ್ನಿ:** ಮತ್ತೆ... ಹಗಲೆಲ್ಲ ನೀವು ನನಗೆ ನೀರು ಯಾಕೆ ಚಿಮುಕಿಸ್ತೀರಾ?

**ಪತಿ:** ಹಾಗಲ್ವೆ ನಿಮ್ಮಪ್ಪ ಹೇಳಿದ್ದಾನೆ ನನ್ನ ಮಗಳನ್ನ ಹೂವಿನಂಗೆ ನೋಡ್ಕೋ ಅಂತ ಅದಕ್ಕೆ.

★★★

### ಅವರು ಮತ್ತು ನಾನು

**ಹುಡುಗಿ:** ಮೊಬೈಲ್ ಎಲ್ಲಿ ತೊಗೊಂಡೆ?

**ಹುಡುಗ:** ರನ್ನಿಂಗ್ ರೇಸ್‌ನಲ್ಲಿ ಗೆದ್ದೆ

**ಹುಡುಗಿ:** ಎಷ್ಟು ಜನ ಓಡಿದ್ರಿ?

**ಹುಡುಗ:** ಮೊಬೈಲ್ ಓನರ್, ನಾನು ಮತ್ತು ಪೊಲೀಸ್.

★★★

### ಮೊದಲೇ ಗೊತ್ತಾಗಿದ್ದರೆ

**ಯಂಕ:** ಯಾಕೋ ಒಂಥರಾ ಇದ್ದೀಯಾ?

**ಸೀನ:** ಅದೇ ಕಣಯ್ಯ ಬ್ಯಾಂಕಿನೋರು ತಗೊಂಡು ಹೋದರು.

**ಯಂಕ:** ಅದೇನು ಅಂತ ಬಿಡಿಸಿ ಹೇಳು ಮಾರಾಯ.

**ಸೀನ:** ಅಯ್ಯೋ ಸಾಲ ತುಂಬಲಿಲ್ಲ ಅಂತ ಬ್ಯಾಂಕಿನವರು ಟ್ರ್ಯಾಕ್ಟರ್ ತಗೊಂಡು ಹೋದ್ರು.

**ಯಂಕ:** ಇರಲಿ ಬಿಡು.

**ಸೀನ:** ನಾ ಚಿಂತೆ ಮಾಡುತ್ತಿರುವುದು ಅದಕ್ಕಲ್ಲ.

**ಯಂಕ:** ಮತ್ತೆ?

**ಸೀನ:** ಮೊದಲೇ ಗೊತ್ತಾಗಿದ್ದಿದ್ದರೆ ನಾನು ಮದುವೆ ಸಾಲಾನೂ ತಗೋತಿದ್ದೆ!

(ಸಂಗ್ರಹ) **ಕುಬೇರಪ್ಪ ಎಂ. ವಿಭೂತಿ, ಹರಿಹರ**

**ಡಾಕ್ಟರ್:** ಹೇಗಿದ್ದೀರಿ ಇವತ್ತು?

**ರೋಗಿ:** ಹಾಗೇ ಇದ್ದೀನಿ. ಉಸಿರಾಟಕ್ಕೆ ತೊಂದರೆ.

**ಡಾಕ್ಟರ್:** ನಿಲ್ಲಿಸುತ್ತೇನೆ ಹೆದರಬೇಡಿ!

–ಟಿಪ್ಸ್